# ಜಿಲ್ಲಾ ಪಂಚಾಯತ ರಾಯಚೂರು.

ಸಂ:ಜಿಪಂರಾ:ಗ್ರಾನೀಸ:ARWSP:ಆಂಮ:ವಿವ3:2007-08 ದಿನಾಂಕ: 18-01-2008

**ಆದೇಶ.**

ವಿಷಯ : **ಸಿಂಧನೂರು ತಾಲ್ಲೂಕು ಮುಕ್ಕುಂದ ಗ್ರಾಮದಲ್ಲಿ ಕೋ.ನೀ.ಸರಬರಾಜು ಯೋಜನೆ ಸುಧಾರಣೆ ಕಾಮಗಾರಿ ಅಚಿದಾಜು ಪತ್ರಿಕೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.**

ಉಲ್ಲೇಖ: ಕಾರ್ಯ ಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಅವರ ಪತ್ರ ಸಂ:ಕಾನಿಅ/ಪಂರಾಇಂ/ರಾವಿ/ಕಿ.ಇಂ.-2/2007-08/3233 ದಿನಾಂಕ:3-1-2008.

ಕಾರ್ಯಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಉಲ್ಲೇಖಿತ ಪತ್ರದ ಮೂಲಕ ಸಿಂಧನೂರು ತಾಲ್ಲೂಕಿನ ಮುಕ್ಕುಂದ ಗ್ರಾಮದಲ್ಲಿನ ಕುಡಿಯುವ ನೀರು ಕಲುಷಿತಗೊಂಡಿದ್ದು ಇದರಿಂದ ಗ್ರಾಮದಲ್ಲಿನ ಜನರು ವಾಂತಿ, ಭೇದಿಯಿಂದ ನರಳುತ್ತಿದ್ದಾರೆಂದು ಕುಡಿಯುವ ನೀರಿನ ಮಾದರಿಯ ರಸಾಯನಿಕ ವಿಶ್ಲೇಷಣೆ ವರದಿ ಆಧಾರದ ಮೇಲೆ ಯೊಂದಿಗೆ, ಬೇರೆ ಜಲಮೂಲದಿಂದ ಗ್ರಾಮಕ್ಕೆ ಕುಡಿಯುವ ನೀರನ್ನು ಪೂರೈಸುವುದಕ್ಕಾಗಿ ರೂ. 5.00 ಲಕ್ಷಗಳ ಅಂದಾಜು ಪತ್ರಿಕೆಯನ್ನು ಸಲ್ಲಿಸುತ್ತಾ ಆಡಳಿತಾತ್ಮಕ ಮಂಜೂರಾತಿ ನೀಡಲು ಮತ್ತು ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಕಾರ್ಯಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಸಲ್ಲಿಸಿದ ಅಂದಾಜು ಪತ್ರಿಕೆಯನ್ನು ಪರಿಶೀಲಿಸಲಾಗಿ, ಈ ಕಾಮಗಾರಿಯು 2007-08 ನೇ ಸಾಲಿನ ಯಾವುದೇ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಸೇರಿರುವುದಿಲ್ಲ. ಆದರೆ ಕಾಮಗಾರಿಯನ್ನು ತೆಗೆದುಕೊಳ್ಳುವುವದು ಅತೀ ಅವಶ್ಯವಾದುದರಿಂದ ಈ ಕಾಮಗಾರಿಯನ್ನು ರಾಜ್ಯವಲಯದಡಿ (MNP) 2007-08 ನೇ ಸಾಲಿನ ಹೆಚ್ಚುವರಿ ಕಾಮಗಾರಿಯಾಗಿ ಪರಿಗಣಿಸಿ ಕೆಳಕಾಣಿಸಿದ ಷರತ್ತಿಗೊಳಪಟ್ಟು ರೂ. 5.00 ಲಕ್ಷಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

**ಷರತ್ತುಗಳು:**

1. ಈ ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಬೇರೆ ಯಾವುದೇ ಯೋಜನೆಯಲ್ಲಿ ತೆಗೆದುಕೊಂಡಿಲ್ಲವೆಂದು ದೃಢೀಕರಿಸುವುದು.
2. ಈ ಕಾಮಗಾರಿಗಳನ್ನು 2007-08 ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಬೇಕು. ಯಾವುದೇ ಕಾರಣಕ್ಕೂ ಈ ಕಾಮಗಾರಿಗಳು ಮುಂದಿನ ವರ್ಷಕ್ಕೆ ಮುಂದುವರೆದ ಕಾಮಗಾರಿಗಳಾಗದಂತೆ ನೋಡಿಕೊಳ್ಳತಕ್ಕದ್ದು.
3. ಜಿಲ್ಲಾ ಪಂಚಾಯತ ಕಛೇರಿಯಲ್ಲಿ ಕಾಮಗಾರಿಗಳ ಗಣಕೀಕೃತ ಮಾಹಿತಿಯನ್ನು update ಮಾಡಲು ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ ಹಾಗೂ ಪೂರ್ಣಗೊಳಿಸಿದ ದಿನಾಂಕ ಅಥವಾ ಪೂರ್ಣಗೊಳಿಸಬಹುದಾದ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಈ ಕಾರ್ಯಾಲಯದಿಂದ ನೀಡಿದ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ. ಹಾಗೂ ಹಿಂದಿನ ಮಾಹೆಯಲ್ಲಿನ ವೆಚ್ಚದ ವಿವಿರಗಳನ್ನು ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು.
4. ಕಾಮಗಾರಿಯ ಅನುಷ್ಠಾನ ಮತ್ತು ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಸಂಬಂದಿಸಿದ ಗ್ರಾಮ ಪಂಚಾಯಿತಿಗೆ ಒದಗಿಸುವುದು.
5. ವೆಚ್ಚವನ್ನು ಸಂಬಂದಿಸಿದ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸುವುದು.

(ಎಸ್.ಅನೀಸ್ ಸಿರಾಜ್)
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ರಾಯಚೂರು.

**ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಇವರಿಗೆ ಕಳುಹಿಸಿದೆ.**

1. ಮಾನ್ಯ ಅದ್ಯಕ್ಷರು/ಉಪಾದ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
3. ಕಾರ್ಯ ಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಇವರಿಗೆ ಆಡಳಿತ ಮಂಜೂರಾತಿ ನೀಡಿದ ಅಂದಾಜು ಪಟ್ಟಿಗಳನ್ನು ಲಗತ್ತಿಸಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರು ಜಿಲ್ಲಾ ಪಂಚಾಯತ ಇಂಜಿನೀಯರಿಂಗ ಉಪವಿಭಾಗ ಸಿಂಧನೂರು
5. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ ಸಿಂಧನೂರು.
6. ಅದ್ಯಕ್ಷರು / ಕಾರ್ಯದರ್ಶಿಗಳು ಮುಕ್ಕುಂದ ಇವರಿಗೆ ರವಾನಿಸುತ್ತಾ ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿಯ ಬಗ್ಗೆ ಗ್ರಾಮ ಪಂಚಾಯತ ಮಾಸಿಕ ಸಭೆಯಲ್ಲಿ ಓದಿ ದೃಢೀಕರಿಸುವುದು.
7. ಜಿಲ್ಲಾ ಪಂಚಾಯತ ರಾಯಚೂರು ಸೂಚನಾ ಫಲಕಕ್ಕೆ.
8. ಕಛೇರಿ ಪ್ರತಿ.